**ಸರ್ಕಾರಿ ಪ್ರೌಢಶಾಲೆ ರೂಪಗುಡಿ ಬಳ್ಳಾರಿ ಪೂರ್ವವಲಯ**

**ಹತ್ತನೇ ತರಗತಿಯ ಮಾದರಿ ಪ್ರಶ್ನೆ ಪತ್ರಿಕೆ**

**ಪ್ರಥಮ ಭಾಷೆ ಕನ್ನಡ**

**ಗರಿಷ್ಠ ಅಂಕಗಳು:100** **ಅವಧಿ:3:00**

**ಸೂಚನೆಗಳು:** ಪ್ರಶ್ನೆ ಪತ್ರಿಕೆಯು ಎ, ಬಿ, ಮತ್ತು ಸಿ ಎಂಬ ಮೂರು ಭಾಗಗಳನ್ನು ಒಳಗೊಂಡಿದೆ. ಸೂಚನೆಯನ್ನು ಅನುಸರಿಸಿ ಉತ್ತರಗಳನ್ನು ಬರೆಯಿರಿ. ಉತ್ತರಗಳನ್ನು ನೇರವೂ, ಸ್ಪಷ್ಟವೂ, ಆಗಿದ್ದು, ಅಂಕಗಳಿಗೆ ತಕ್ಕಂತೆ ವಿಸ್ತಾರವಿರಲಿ ಪ್ರತಿ ಪ್ರಶ್ನೆಗೂ ಉತ್ತಕ್ಕಾಗಿ ಮೀಸಲಿಟ್ಟ ಜಾಗದಲ್ಲಿ ಉತ್ತರ ಬರೆಯುವುದು ಖಡ್ಡಾಯ

## ಭಾಗ–'ಎ'

ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ. **9*1=9**

1. ಶ್ರೀರಾಮನಿಗೆ ಸಮರ್ಪಸಲು ಶಬರಿ ಏನನ್ನು ಸಂಗ್ರಹಿಸಿದ್ದಳು?
2. ರಾಯನು ವಿಧಿಸಿದ ಕಟ್ಟಳೆಯನ್ನು ಮೀರಿದರೆ ಆಗುವ ಪರಿಣಾಮಗವೇನು?
3. ವಿಶ್ವೇಶ್ವರಯ್ಯ ಅವರನ್ನು ದಿವಾನವರಾಗಿ ನೇಮಿಸಿದವರು ಯಾರು?
4. ಧರ್ಮಾಧಿಕರಣರು ವಟವೃಕ್ಷದ ಸಮೀಪಕ್ಕೆ ಏಕೆ ಬಂದರು?
5. ಶಾನುಭೋಗದ ಬ್ರಹ್ಮಾಸ್ತ್ರ ಯಾವುದು?
6. ಮಾನವನ ಸ್ವಭಾವವನ್ನು ವಚನಕಾರರು ಯಾವುದಕ್ಕೆ ಹೋಲಿಸಿದ್ದಾರೆ?
7. ಅಶ್ವಿನಿ ದೇವತೆಗಳ ವರಬಲದಿಂದ ಜನಿಸಿದವರು ಯಾರು?
8. 'ಸಂಕಟಕೆ ಗಡಿ ಇಲ್ಲ' ಕಾವ್ಯದ ಆಕರ ಗ್ರಂಥ ಯಾವುದು?
9. ಮುದ್ದು ಪಾರಿವಾಳಗಳ ಜೋಡಿ ಎಲ್ಲಿ ಸಂಸಾರ ಹೂಡಿತು?

ಈ ಕೆಳಗಿನ ಪ್ರಶ್ನೆಗಳಿಗೆ ಮೂರು–ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ **10*2=20**

10. ಬುಕ್ಕರಾಯನು ನಡೆಸಿದ ಧರ್ಮಸಭೆಗೆ ಯಾರನ್ನೆಲ್ಲ ಆಹ್ವಾನಿಸಿದನು?
11. ನೆಹರೂ ಅವರು ಸರ್.ಎಂ. ವಿಶ್ವೇಶ್ವರಯ್ಯ ಅವರ ಬಗ್ಗೆ ಏನೆಂದು ಹೇಳಿದ್ದಾರೆ?
12. ದೃಷ್ಟಬುದ್ದಿಗೆ ಆತನ ತಂದೆ ಏನೆಂದು ಸಲಹೆ ನೀಡಿದನು?
13. ಹುಲಿಯು ಹಿಂದಿನಿಂದ ಹಾರಿ ಕೊಲ್ಲದಿರಲು ಕಾರಣವೇನು?
14. ಭಕ್ತಿ ಮತ್ತು ನಿಷ್ಠೆ ಬಗ್ಗೆ ಜೇಡರ ದಾಸಿಮಯ್ಯನ ಅಭಿಪ್ರಾಯವೇನು?
15. ನನ್ನಾಸೆ ಕವನದಲ್ಲಿ ಕವಯಿತ್ರಿವರ ಆಸೆಗಳೇನು?
16. ಭರತ ಚಕ್ರವರ್ತಿಗೆ ತನ್ನ ಹೆಸರನ್ನು ಬರೆಸಲು ಏಕೆ ಸಾಧ್ಯವಾಗಲಿಲ್ಲ?
17. ಲೇಖಕರ ಪ್ರಕಾರ ವಿಶ್ವಧರ್ಮಯಾವಾಗ ರೂಪಿತವಾಗಬಲ್ಲದು?
18. ಕ್ರಿಯಾ ಸ್ವಾತಂತ್ರ್ಯ ಎಂದರೇನು?
19. ಎಂಟನೇಯ ಒಗಟಿನ ಉತ್ತರ 'ಕೊಕ್ಕರೆ' ಎಂಬುದನ್ನು ತಿಳಿಸಿ.

ಈ ಕೆಳಗಿನ ಪ್ರಶ್ನೆಗಳಿಗೆ ಸಂದರ್ಭಸಹಿತ ಸ್ವಾರಸ್ಯ ಬರೆಯಿರಿ **4*3=12**

20. "ತಾಯಿ ದಾರಿಗರಿಗೆ ಬೀಡಿಲ್ಲಿ ದೊರೆಯುವುದೇ"?
21. "ವನ್ರಯ್ಯ್ ಏನ್ ಮಾಸ್ತಾ ಇದ್ದೀರಿ"?
22. "ಜೀವ ಸತ್ತು ಹೋಗುವುದು ಗೊತ್ತಾ"
23. "ನಿನ್ನ ಪದೆಸೆಯ ಬಯಸುವನಲ್ಲ"?

ಈ ಕೆಳಗಿನ ಕವಿಗಳ ಸ್ಥಳ,ಕಾಲ,ಕೃತಿಗಳು ಪ್ರಶಸ್ತಿ/ಬಿರುದುಗಳನ್ನು ಕರಿತು ವಾಕ್ಯರೂಪದಲ್ಲಿ ಬರೆಯಿರಿ **2*3=06**

24. ವಿ.ಕೃ.ಗೋಕಾಕ್
25. ಕುಮಾರವ್ಯಾಸ

ಈ ಕೆಳಗಿನ ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿರಿ. **2*3=06**

26. ಕಲುಷಿತವಾದೀ–––––––––––––––
––––––––––––––––––––––
––––––––––––––––––––––
–––––––––––––––––––––– ಮುಚ್ಚೋಣ

ಅಥವಾ

ಮತಗಳೆಲ್ಲವೂ–––––––––––––––

**Use E-Papers, Save Trees**
**above line hide when print out-www.inyatrust.com**

-----------------------
-----------------------
----------------------- ಬಿತ್ತೋಣ

ಈ ಕೆಳಗಿನ ಪದ್ಯಭಾಗವನ್ನು ಓದಿ ಅರ್ಥಮಾಡಿಕೊಂಡು, ಅಡಕವಾಗಿರುವ ಮೌಲ್ಯಮಾಪನವನ್ನಾಧರಿಸಿ ಸಾರಾಂಶ ಬರೆಯಿರಿ. 2*3=06

27. ಕರಿನರೆ ಬಣ್ಣದ ಪುಚ್ಚಗಳುಂಟು
ಬಿಳಿ–ಹೊಳೆ ಬಣ್ಣದ ಗರಿ–ಗರಿಯುಂಟು
ಕೆನ್ನನ ಹೊನ್ನನ ಬಣ್ಣ–ಣ್ಣಗಳ
ರೆಕ್ಕೆಗಳರಡೂ ಪಕ್ಕದಲುಂಟ್ಟು
ಹಕ್ಕಿ ಹಾರುತಿದೆ ನೋಡಿದಿರಾ?

ಈ ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರಿಸಿರಿ. 2*4=08

28. ಗೊರೂರು ರಾಮಸ್ವಾಮಿ ಅಯ್ಯಂಗಾರರ ವೇಷ ಭೂಷಣಗಳು ಹೇಗಿದ್ದವು?

ಅಥವಾ

ವಿದ್ಯುತ್ ಒಲೆಯಿಂದ ಉಂಟಾಗಬಹುದಾಗಿದ್ದ ಅಪಾಯವನ್ನು ಗೊರೂರರು ಹೇಗೆ ಪರಿಹರಿಸಿಕೊಂಡರು?

29. ದುರ್ಯೋಧನನ ತಂದೆ–ತಾಯಿಯವರು ಅವನನ್ನು ಸಂಧಿಗಾಗಿ ಪ್ರಾರ್ಥಿಸಿದ ರೀತಿಯನ್ನು ವಿವರಿಸಿ

ಅಥವಾ

ಧೃತರಾಷ್ಟ್ರನು ಸಂಧಿ ಮಾಡಿಕೋ ಎಂದು ಧುರ್ಯೋಧನನಿಗೆ ಹೇಳಲು ಕಾರಣವೇನು?

ಈ ಕೆಳಗಿನ ಗದ್ಯ ಭಾಗವನ್ನು ಓದಿಕೊಂಡು ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ. 1*4=4(2+2)

30. ಬದುಕಿನಲ್ಲಿ ನಮ್ಮ ಎಲ್ಲಾ ಸಾಧನೆ ಸಿದ್ಧಿಗಳು ಮನಸ್ಸಿನಲ್ಲಿ ಉದಿಸಿದ ಯೋಚನೆ ಕಲ್ಪನೆ ಸಂಕಲ್ಪ ಭಾವನೆಗಳ ಮಾದರಿಯನ್ನನುಸರಿನಿಯೋ ಸಾಧ್ಯವಾಗಿವೆ. ಸ್ವಯಂ ಚಾಲಿತ ಯಂತ್ರಗಳ ಬಳಕೆ ಇತ್ತೀಚಿಗೆ ಸರ್ವತ್ರಿ ಪ್ರಸಾರವಾಗುತ್ತಿದೆ. ನಮ್ಮ ದೈವದತ್ತವಾಗಿ ಸಿಕ್ಕಿರುವ ಪರಮಾತ್ಮಯಂತ್ರವಾದ ಮನಸ್ಸಿಗೆ ಒಳ್ಳೆಯ ಯೋಚನೆ ಮತ್ತು ಒಳ್ಳೆಯ ಆದರ್ಶಗಳನ್ನು ಕ್ರಮವರಿತು ಫೀಡ್ ಮಾಡಿದರೆ ನಾವು ಪಡೆಯಬುಹುದಾದ ಸಂತೋಷ, ಶಾಂತಿ, ಸಂತೃಪ್ತಿ, ಸದ್ಭಾವನೆಯಳನ್ನು ಅಲುಗಾಡಿಸಲು ಯಾರಿಂದಲೂ ಸಾಧ್ಯವಿಲ್ಲ.

ಪ್ರಶ್ನೆಗಳು:
1. ನಮ್ಮ ಬದುಕಿನ ಸಾಧನೆಗೆ ಸಹಾಯಕವಾಗುವ ಅಂಶಗಳು ಯಾವವು?
2. ನಮ್ಮ ಸಂತೋಷ ಶಾಂತಿ ಸದ್ಭಾವನೆಗಳನ್ನು ಹೇಗೆ ಅಲುಗಾಡಿಸಲು ಸಾಧ್ಯವಿಲ್ಲ?

## 'ಭಾಗ–ಬಿ'

ಈ ಕಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ಕೊಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರಗಳನ್ನು ಆರಿಸಿ ಉತ್ತರಕ್ಕಾಗಿಯೋ ಕೊಟ್ಟಿರುವ ಜಾಗದಲ್ಲಿ ಕ್ರಮಾಕ್ಷರದೊಂದಿಗೆ ಉತ್ತರವನ್ನು ಬರೆಯಿರಿ. 10*1=10

31. ಇವುಗಳಲ್ಲಿ ಅನುಸ್ವಾರ ಮತ್ತು ವಿಸರ್ಗ ಸಹಿತ ಪದ
ಎ) ಅಂತಃಪುರ ಬಿ) ದು:ಖ
ಇ) ಅನಂತರ ಡಿ) ಸನ್ಮಾನ

32. ಈ ಕೆಳಗಿನ ಪದಗಳಲ್ಲಿ ಗುಣ ಸಂಧಿಗಯಾಗುವ ಪದ
ಎ) ಐಕೈಕ ಬಿ) ಸೂರ್ಯೋದಯ
ಸಿ) ಅತ್ಯವಸರ ಡಿ) ದಿಗಂತ

33. 'ಅಮೃತ' ಪದದ ತದ್ಭವ ರೂಪ
ಎ) ಆವೃತ ಬಿ) ಸುಧಾ
ಸಿ) ಅಮದಳ ಡಿ) ಹಾಲು

34. 'ಕೆಲದೊಳ್' ಪದದಲ್ಲಿರುವ ವಿಭಕ್ತಿ ಪ್ರತ್ಯಯ
ಎ) ಪಂಚಮಿ ಬಿ) ಷಷ್ಠಿ
ಸಿ) ಸಪ್ತಮಿ ಡಿ) ಪ್ರಥಮ

35. 'ಹರ್ಷ,ಆಶ್ಚರ್ಯ, ಸಂತೋಷ, ದುಃಖ ಮುಂತಾದ ಭಾವನೆಗಳನ್ನು ಸೂಚಿಸುವ ಪದಗಳ ಮುಂದೆ ಸೂಚಿಸುವ ಚಿಹ್ನೆ.
ಎ) ಭಾವಸೂಚಕ ಬಿ) ಪ್ರಶ್ನಾರ್ಥಕ
ಸಿ) ಆವರಣ ಡಿ) ಉದ್ಧರಣ

36. 'ಹಿಂದಲೆ' ಪದವೂ ಈ ಸಮಾಸಕ್ಕೆ ಉದಾಹರಣೆ.
ಎ) ದ್ವಿಗು ಸಮಾಸ ಬಿ) ಅಂಶಿಸಮಾಸ
ಸಿ) ಕ್ರಿಯಾಸಮಾಸ ಡಿ) ತತ್ಪುರುಷ ಸಮಾಸ

37. ಈ ಕೆಳಗಿನವುಗಳಲ್ಲಿ ತದ್ಧಿತಾಂತನಾಮಕ್ಕೆ ಉದಾಹರಣೆ.

Use E-Papers, Save Trees
above line hide when print out-www.inyatrust.com

ಎ) ಕಪ್ಪು ಬಿ) ಚಂದ್ರನಂತೆ
ಸಿ) ಸಿರಿವಂತ ಡಿ) ಚಲುವಿಕೆ

38. 'ವಿದ್ವಾಂಸ' ಎಂಬ ಪದವೂ ಈ ವ್ಯಾಕರಣಾಂಶಕ್ಕೆ ಉದಾಹರಣೆ.
ಎ) ಸರ್ವನಾಮ ಬಿ) ರೂಢನಾಮ
ಸಿ) ಅಂಕಿತನಾಮ ಡಿ) ಅನ್ವರ್ಥಕನಾಮ

39. 'ಗುರುಮೂರಿರೆ' ಈ ಅಕ್ಷರಗಣವಾಗುತ್ತದೆ.
ಎ) ಮ ಗಣ ಬಿ) ಯ ಗಣ
ಸಿ) ರ ಗಣ ಡಿ) ಜ ಗಣ

40. 'ಪ್ರವಾಸವು ಅನುಭವಗಳನ್ನು ಹೆಚ್ಚಿಸುತ್ತದೆ' ಈ ವಾಕ್ಯವು
ಎ) ಸಾಮಾನ್ಯವಾಕ್ಯ ಬಿ) ಮಿಶ್ರವಾಕ್ಯ
ಸಿ) ಸಂಯೋಜಿತವಾಕ್ಯ ಡಿ) ಯಾವುದೂ ಅಲ್ಲ.

ಈ ಕಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ಕೊಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರಗಳನ್ನು ಆರಿಸಿ ಉತ್ತರಕ್ಕಾಗಿಯೋ ಕೊಟ್ಟಿರುವ ಜಾಗದಲ್ಲಿ ಕ್ರಮಾಕ್ಷರದೊಂದಿಗೆ ಉತ್ತರವನ್ನು ಬರೆಯಿರಿ. **10*1=10**

41. ಅಜ್ಜ :–ಸಜಾತಿ ಸಂಯುಕ್ತಾಕ್ಷರ :: ಭಕ್ತ :––––––––––––––
42. ಬನ್ನಿ ಬನ್ನಿ : ದ್ವಿರುಕ್ತಿ :: ಹುಳಹುಪ್ಪಡಿ:––––––––––––––
43. ಕಳುವ್ಯಾರೆ : ಕಳುಹಿಸಿದ್ದಾರೆ :: ಇಲ್ಲಹ್ಹಂಗ:–––––––––––––
44. ತಂಬಾಕು : ಪೋರ್ಚಗೀಸ್ :: ಬಂದೂಕು:–––––––––––––

ಈ ಕಳಗಿನ ಪದ್ಯ ಭಾಗಕ್ಕೆ ಪ್ರಸ್ತಾರ ಹಾಕಿ ಗಣ ವಿಭಾಗ ಮಾಡಿ ಛಂದಸ್ಸಿನ ಹೆಸರನ್ನು ಬರೆಯಿರಿ. **01*3=3**

45. ಏನು ಹೇಳೈಕರ್ಣ ಚಿತ್ತ
ಗ್ಲಾನಿ ಯಾವುದು ಮನಕೆ ಕುಂತೀ
ಸೂರುಗಳ ಬೆಸಕೈಸಿಕೊಂಬುವುದು ಸೇರದೇನಿನಗೆ

ಅಥವಾ

ಕುರುಕುಳನಂದನಂ ಪವನಂದನನೆಂಬ ಮದಾಂಧಗಂಧಸಿರಿ.

ಈ ಕೆಳಗಿನ ವಾಕ್ಯಗದಲ್ಲಿರುವ ಅಲಂಕಾರವನ್ನು ಹೆಸರಿಸಿ ಲಕ್ಷಣ ಬರೆದು ಸಮನ್ವಯಿಸಿರಿ **01*3=3**

46. 'ಸಿಡಿಲ ಸಿಡಿದ್ಹಾಂಗ್ ಗುಂಡು ಸುರಿದಾವ'

ಅಥವಾ

'ಮಾರಿಗೌತಣವಾಯ್ತುಂ ನಾಳಿನ ಭಾರತವು'

## 'ಭಾಗ–ಸಿ'

ಕೆಳಗಿನ ಕೊಟ್ಟಿರುವ ಗಾದೆಗಳಲ್ಲಿ ಯಾವುದಾದರೂ ಒಂದನ್ನು ವಿಸ್ತರಿಸಿ ಬರೆಯಿರಿ. **01*3=3**

47. * ದೇಶಸುತ್ತಿ ನೋಡು ಕೋಶ ಓದಿ ನೋಡು
* ಗಿಡವಾಗಿ ಬಗ್ಗದ್ದು ಮರವಾಗಿ ಬಗ್ಗೀತೆ?
* ಮೋಹ ಮುಸುಗಿದ ಬುದ್ದಿ ಸರ್ವನಾಶದ ಸಿದ್ದಿ.

48. ನಿಮ್ಮ ಗ್ರಾಮದಲ್ಲಿ ಒಂದು ಗ್ರಂಥಾಲಯ ಆರಂಭಿಸಿ ಕೊಡುವಂತೆ ನಿಮ್ಮ ಕ್ಷೇತ್ರದ ಶಾಸಕರಿಗೆ ಮನವಿ ಪತ್ರ ಬರೆಯಿರಿ. **1*5=5**

ಅಥವಾ

ನಿಮ್ಮ ಪರೀಕ್ಷಾ ಪೂರ್ವ ಸಿದ್ದತೆ ಕುರಿತು ಬೆಂಗಳೂರಿನಲ್ಲಿರುವ ನಿಮ್ಮ ತಂದೆಗೆ ಒಂದು ಪತ್ರವನ್ನು ಬರೆಯಿರಿ.

49. ಈ ಕಳಗಿನ ವಿಷಯಗಳಲ್ಲಿ ಯಾವುದಾದರೂ ಒಂದನ್ನು ಕುರಿತು ಹದಿನೈದು ವಾಕ್ಯಗಳಲ್ಲಿ ಕಡಿಮೆ ಇಲ್ಲದಂತೆ ಪ್ರಬಂದ ಬರೆಯಿರಿ. **1*5=5**

- ಸ್ವಚ್ಛತೆ ಭಾರತ ಅಭಿಯಾನದಲ್ಲಿ ವಿದ್ಯಾರ್ಥಿಗಳ ಪಾತ್ರ.
- ಶಿಕ್ಷಣದಲ್ಲಿ ಗಣಕಯಂತ್ರ ಪಾತ್ರ
- ಶಾಲಾ ಗ್ರಂಥಗಳ ಸದ್ಬಳಕೆ.

–––––****–––––

**Use E-Papers, Save Trees**
**above line hide when print out-www.inyatrust.com**